# ಕೊಲೆಯ ಸಿಕ್ಕುಗಳ ನಡುವಿಂದ ಹೊರಬಂದ ಮಾದಕವಸ್ತು ಘಾಟು

ಜೀಪ್‌ನಲ್ಲಿ ಹೋಗುವಾಗ, ಸಂಘರ್ಷದಲ್ಲಿ ತನ್ನ ಕೈಗೆ ಗಾಯ ಮಾಡಿದ ರವಿಯನ್ನು ಮಾಯಣ್ಣ ಮಾನಸಿಕವಾಗಿ ಬೆದರಿಸತೊಡಗಿದ.

ರವಿ ಬಗ್ಗಿಸಿದ್ದ ತಲೆ ಎತ್ತಲಿಲ್ಲ.

'ಅರ್ಜೆಂಟ್ ಇಲ್ಲ ಸಾರ್. ಅಲ್ಲೇ ಸ್ಟೇಷನ್ನಲ್ಲೇ ಶುರು ಹಚ್ಕೊಳ್ತೀನಿ. ಆದರೆ ಸ್ವಲ್ಪ ಜಾಸ್ತಿ ಟೈಮ್ ಕೊಡಬೇಕು ಸಾರ್...'

'ಭುಜಂಗ, ಸ್ಟೇಷನ್ನಲ್ಲಿ ನೀವೊಬ್ರೇನಾ ಇರೋದು? ಎಲ್ಲಾನು ಹಂಚಿಕೊಂಡು ಬದುಕೋದು ಕಲೀಬೇಕು. ಏನು?'

'ಯೆಸ್ ಸಾರ್...'

ಮಾಯಣ್ಣನ ಜೀಪು ಜೆ ಜೆ ನಗರದ ಪೊಲೀಸ್ ಠಾಣೆಯ ಅಂಗಳಕ್ಕೆ ಹಿಂತಿರುಗಿ ಬಂದಿತ್ತು. ಒಳಕ್ಕೆ ಬಂದ ಮಾಯಣ್ಣ ವಿನಯ್‌ನ ಕುರಿತು, 'ನಾನು ಆಸ್ಪತ್ರೆಗೆ ಹೋಗಿ ಈ ಗಾಯಕ್ಕೆ ಚಿಕಿತ್ಸೆ ಮಾಡಿಸಿ, ಹಾಗೇ ಒಂದು ಮೆಡಿಕಲ್ ಸರ್ಟಿಫಿಕೇಟ್ ಮಾಡಿಸಿಕೊಂಡು ಬರ್ತೀನಿ. ಅಲ್ಲೀತನಕ ಈ ಇಬ್ಬರೂ ಬಿಸಿರಕ್ತದ ಯುವಕರನ್ನು ಬರೀ ಚಡ್ಡಿಯಲ್ಲಿ ಕೂಡಿಸಿ ತಣ್ಣಗಾಗಲು ಬಿಡಿ. ನಾಳೆ ಬೆಳಗ್ಗೆ ಮ್ಯಾಜಿಸ್ಟ್ರೇಟ್ ಮುಂದೆ ಇವರನ್ನು ನಿಲ್ಲಿಸಬೇಕು. ಹೇಗಿದ್ರೂ ಎಸ್‌ಪಿ ಸಾಹೇಬರು ಯಾಕೆ ಯಾರೂ ಇನ್ನೂ ಅರೆಸ್ಟ್ ಆಗಿಲ್ಲ ಅಂತ ಕೇಳ್ತಿದ್ರು'.

ಸ್ಟೇಷನ್ನಿನ ಪೀಸಿಗಳು ಆತಂಕದಿಂದ ಭುಜಂಗನನ್ನು ಮುತ್ತಿಕೊಂಡಿದ್ದರು, ಮಾಯಣ್ಣನಿಗೆ ಏನಾಯಿತೆಂದು ತಿಳಿಯಲು. ಅವರಿಗೆಲ್ಲಾ ನಡೆದದ್ದನ್ನು ವಿವರಿಸಿದ ಭುಜಂಗ 'ಸಾರ್ ಶುರು ಮಾಡ್ಕೊಳ್ತೀವಿ ಸಾರ್...' ಎಂದ.

'ಭುಜಂಗ, ನಾಳೆ ಇವರಿಬ್ಬರನ್ನು ಕೋರ್ಟ್ ಪೊಲೀಸ್ ಕಸ್ಟಡಿಗೆ ಒಪ್ಪಿಸಿದ ಮೇಲೆ ನೋಡೋಣ. ಅಲ್ಲೀತನಕ ಸ್ವಲ್ಪ ಸಂಯಮದಲ್ಲಿ ವಿಚಾರಣೆ ನಡೀಲಿ'.

'ಕುಮಾರ್, ಸ್ಟೇಷನ್ ಡೈರಿನಲ್ಲಿ ನಮ್ಮ ಮೇಲೆ ನಡೆದ ಈ ಹಲ್ಲೆ, ಇವರಿಬ್ಬರನ್ನು ಇಲ್ಲಿ ತಂದು ಕೂಡಿರೋದನ್ನ, ಸೀಜ್ ಮಾಡಿರೊ ಜೀಪನ್ನ ಎಲ್ಲಾ ವಿವರಗಳ ಸಮೇತ ಎಂಟರ್ ಮಾಡಿ'.

'ಯೆಸ್ ಸಾರ್'.

ಇತ್ತ ರವಿ ಮತ್ತು ವಿನೋದನಿಗೆ ಮುಂದೆ ಏನು ಕಾದಿದೆ ಎನ್ನುವುದರ ವಾಸನೆ ಬಡಿದಿತ್ತು.

'ಸಾರಿ ಸರ್... ಗೊತ್ತಿಲ್ಲದೇ ನಡೆದೋಯ್ತು. ಕ್ಷಮಿಸಿ ಬಿಡಿ ಸರ್... ಪ್ಲೀಸ್'.

'ರವಿ ಅಲ್ಲಿ ಸಂತೆಮಾಳದಲ್ಲಿ ಸುಮಾರು ಎಷ್ಟು ಜನ ಇದ್ದರು?'

'.....'

'ಅಷ್ಟು ಜನರ ಮುಂದೆ ಪೊಲೀಸಿನವರ ಮೇಲೆ ಕೈಮಾಡಿ ಈಗ ಇಲ್ಲಿ ಪ್ರೈವೇಟ್ ಆಗಿ ಕ್ಷಮಿಸಿಬಿಡಿ ಸಾರ್ ಅಂದ್ರೆ ಹೇಗೆ? ಹೀಗೇ ಬಿಟ್ರೆ ನಾಳೆ ದಿವಸ ಪೊಲೀಸಿನವರ ಮೇಲೆ ಯಾವನು ಬೇಕಾದ್ರೂ ಕೈ ಮಾಡ್ತಾನೆ. ಇದು ಬರೀ ನನ್ನ ವಿಷಯ ಅಲ್ಲ'.

ಅಷ್ಟರಲ್ಲಿ ಅಲ್ಲಿಗೆ ಬಂದ ವಿನಯ್,

